ಮೈಸೂರ ಗೆಜಿಟ್.

ನಂ. 39] ಸರ್ಕಾರದಿಂದ ಘೋಷಿಸಿದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 21, ಸನ್ 1904.

IIIನ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

1903ನೆ ವರುಷದ 5ನೆ ನಂಬರಿನ ರೆಗ್ಯುಲೇಷನ್.

(1903ನೆ ವರುಷದ ಡಿಸೆಂಬರ್ 14ನೆ ತಾರೀಖಿನಲ್ಲಿ ಮಂಜೂರಾದ್ದು).

ಪಟ್ಟಿನ ಶಿಕ್ಷೆಗೆ ಸಮ್ಬಂಧಪಟ್ಟ ಕಾನೂನನ್ನು ಸರಿಪಡಿಸುವದಕ್ಕಾಗಿ ಆಗಿರುವ ರೆಗ್ಯುಲೇಷನ್.

ಪೀಠಿಕೆ.

ಪಟ್ಟಿನ ಶಿಕ್ಷೆಗೆ ಸಮ್ಬಂಧಪಟ್ಟ ಕಾನೂನನ್ನು ಸರಿಪಡಿಸುವದು ಯುಕ್ತವಾ ಯಿರುವದರಿಂದ ಘನವನ್ನೈದಿದ ಶ್ರೀಪೂಜ್ಯ ಮಹಾರಾಜಾ ಸಾಹೇಬರು ಇದರಲ್ಲೀ ಕಂಡಂತೆ ಕಾನೂನನ್ನು ನಿರ್ಣಯಿಸಿರುತ್ತಾರೆ.

ಚಿಕ್ಕ ಹೆಸರು.

1. ಈ ರೆಗ್ಯುಲೇಷನ್ "1903ನೇ ವರುಷದ ಮೈಸೂರು ಸೀಮೆಯ ವಿಪ್ಪಿಂಗ್ ರೆಗ್ಯುಲೇಷನ್" ಎಂದು ಕರೆಯಲ್ಪಡಬಹುದು;

ವ್ಯಾಪ್ತಿ.

ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸತಕ್ಕದ್ದು; ಮತ್ತು

ಪ್ರಾರಂಭ.

ಇದು ಮಂಜೂರಾದ ತೇದಿಯ ಅರಭ್ಯ ಜಾರಿಯಲ್ಲಿ ಬರತಕ್ಕದ್ದು.

ರದ್ದಿಯಾತು.

ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ 1861ನೆ ವರುಷದ VIನ ನಂಬರಿನ ಆಕ್ಟು ಈ ಮೂಲಕ ರದ್ದುಪಡಿಸಲ್ಪಟ್ಟಿರುತ್ತೆ.

ಪೀನಲ್ ಕೋಡಿನ 53ನೆ ಪ್ರಕರಣದಲ್ಲಿ ಹೇಳಿರುವ ಶಿಕ್ಷೆಗಳೊಂದಿಗೆ ಪಟ್ಟಿನ ಶಿಕ್ಷೆಯನ್ನು ಸೇರಿಸೋಣ.

2. ಇಂಡ್ಯನ್ ಪೀನಲ್ ಕೋಡಿನ 53ನೆ ಪ್ರಕರಣದಲ್ಲಿ ನಮೂದಿಸಿರುವ ಶಿಕ್ಷೆಗಳೊಂದಿಗೆ ತಪ್ಪಿತಸ್ಥರು ಪಟ್ಟಿನ ಶಿಕ್ಷೆಗೆ ಸಹ ಗುರಿಯಾಗುತ್ತಾರೆ.

ಪೀನಲ್ ಕೋಡಿನಿಂದ ನಿರ್ದೇಶಿಸಲ್ಪಟ್ಟ ಇತರ ಶಿಕ್ಷೆಯ ಬದಲಾಗಿ ಪಟ್ಟಿನ ಶಿಕ್ಷೆ ವಿಧಿಸಬಹುದಾದ ಅಪರಾಧಗಳು.

3. ಯಾವನು ಈ ಕೆಳಗೆ ಕಾಣಿಸಿದ ಯಾವದಾದರು ಅಪರಾಧಗಳನ್ನು ಮಾಡುತ್ತಾನೋ ಅಂಥಾ ಪ್ರತಿ ಒಬ್ಬ ಮನುಷ್ಯನು ಇಂಡಿಯನ್ ಪೀನಲ್ ಕೋಡಿನ ಮೇರಿಗೆ ಅಂಥಾ ಅಪರಾಧದ ಬಗ್ಗೆ ಅತನು ಗುರಿಯಾಗಬಹುದಾದಂಥಾ ಯಾವದಾದರೂ ಶಿಕ್ಷೆಯ ಬದಲಾಗಿ ಪಟ್ಟಿನ ಶಿಕ್ಷೆಗೆ ವಿಧಿಸಲ್ಪಡಬಹುದು, ಆ ಅಪರಾಧಗಳು ಯಾವವೆಂದರೆ :—

A ಗುಂಪು.

(1) ಸದರಿ ಕೋಡಿನ 378ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ಮೇರೆಗೆ ಕಳವು;

(2) ಸದರಿ ಕೋಡಿನ 380ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ಮೇರೆಗೆ ಬಂದು ಕಟ್ಟಡದಲ್ಲಾಗಲಿ, ಹೇರನುಲ್ಲಾಗಲಿ, ಜಹಜ್ಜಲ್ಲಾಗಲಿ ಕಳವು;

(3) ಸದರಿ ಕೋಡಿನ 381ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಸುಮಾನ್ತಸಿಂದ—ಯಾ—ನ್ಗಿಕರಿಸಿದ ಕಳವು ;

(4) ಸದರಿ ಕೋಡಿನ 382ನೇ ಪ್ರಕರಣದಲ್ಲಿ ವಿವರಿಸಿರುವ ವಿಧದ ಮೇರೆಗೆ ಮರಣ-ಯಾ-ತಿಂಸೆ ಮಾಡಿ ವಶಕ್ಕೆ ಸಮ್ಮಾಸ ಮಾಡಿದ ನಂತರ ಕಳವು ;

B ಗುಂಪು.

(5) ಸದರಿ ಕೋಡಿನ 348ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಹಮಲು ಕಣ್ಣಾಯ ಮಾಡೋಣ ;

(6) ಸದರಿ ಕೋಡಿನ 289ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಕಣ್ಣಾಯ ಮಾಡುವ ಉದ್ದೇಶ ತಪ್ಪನ್ನು ಅಪಾದನೆ ಮಾಡುವದಾಗಿ ಒಬ್ಬ ಮನುಷ್ಯನನ್ನು ಅಂಜಿಸೋಣ ;

C ಗುಂಪು.

(7) ಸದರಿ ಕೋಡಿನ 411ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಅಪ್ರಮಾಣಿಕತೆಯಿಂದ ಚೋರಿ ಮಾಲನ್ನು ತೆಗ ವಕೊಳ್ಳೋಣ ;

(8) ಸದರಿ ಕೋಡಿನ 412ನೇ ಪ್ರಕರಣದಲ್ಲಿ ವಿವರಿಸಿರುವ ವೇರೆಗೆ ಡಕಾಯಿತಿ ನಡಿಯುವಾಗ ಚೋರಿಯಾದ ಮಾಲನ್ನು ಅಪ್ರಮಾಣಿಕತೆಯಿಂದ ತಗದುಕೊಳ್ಳೋಣ ;

D ಗುಂಪು.

(9) ಈ ಪ್ರಕರಣಕ್ಕನುಗುಣವಾಗಿ ಪಟ್ಟನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ನಡಿಸುವ ಉದ್ದೇಶ್ಯ ಸದರಿ ಕೋಡಿನ 443ನೇ ಮತ್ತು 444ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಹೊಂಚುಹಾಕಿಕೊಂಡಿದ್ದವನೆ ಮನೆ ಒಳಗೆ ನುಗ್ಗೋಣ ಅಥವಾ ಮನೆಗೆ ಕನ್ನ ಹಾಕೋಣ ;

(10) ಈ ಪ್ರಕರಣಕ್ಕನುಗುಣವಾಗಿ ಪಟ್ಟನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ನಡಿಸುವ ಉದ್ದೇಶ್ಯ ಸದರಿ ಕೋಡಿನ 444ನೇ ಮತ್ತು 446ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ರಾತ್ರಿ ಕಾಲದಲ್ಲಿ ಹೊಂಚು ಹಾಕಿಕೊಂಡಿದ್ದ ಮನೆಯೊಳಗೆ ನುಗ್ಗೋಣ ಅಥವಾ ರಾತ್ರಿ ಕಾಲದಲ್ಲಿ ಮನೆಗೆ ಕನ್ನ ಹಾಕೋಣ.

3. ಯಾವನು ಹಿಂದಿನ ಈಡೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಯಾವದೊಂದು ಅಪರಾಧವು ಸಾಬೀತು ಪಟ್ಟದ್ದು, ಪುನಹ ಅದೇ ಅಪರಾಧವು ಅಥವಾ ಅದೇ ಗುಂಪಿನಲ್ಲಿ ಸೇರಿದ ಯಾವದೊಂದು ಅಪರಾಧವು ಸಾಬೀತು ಪಡುತ್ತಾನೋ, ಅಂಥಾ ಪ್ರತಿ ಮನುಷ್ಯನು ಇಂಡಿಯ್ಯ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧಕ್ಕೆ ಆತನು ಗುರಿಯಾಗಬಹುದಾದಂಥಾ ಇತರ ಯಾವದಾದರು ಶಿಕ್ಷೆಯ ಬದಲಾಗಿ ಅಥವಾ ಅದಕ್ಕೆ ಕೂಡಿಸಿ ಪಟ್ಟನ ಶಿಕ್ಷೆ ವಿಧಿಸಲ್ಪಡಬಹುದು.

3ನೆ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಅಪರಾಧವು ಎರಡನೆಸಾರಿ ಸಾಬೀತು ಪಟ್ಟಲ್ಲಿ ಪಟ್ಟನ ಶಿಕ್ಷೆಯನ್ನು ಇತರ ಶಿಕ್ಷೆಗೆ ಕೂಡಿಸಿ ವಿಧಿಸಬಹುದು.

5. ಯಾವನು ಈ ಕೆಳಗೆ ಕಾಣಿಸಿದ ಯಾವದಾದರೂ ಅಪರಾಧ ನುಂಜೆ ಸಾಬೀತು ಪಟ್ಟದ್ದು, ಪುನಹ ಅದೇ ಅಪರಾಧವು ಅಥವಾ ಅದೇ ಗುಂಪಿನಲ್ಲಿ ಸೇರಿದ ಯಾವದಾದರೂ ಅಪರಾಧವು ಸಾಬೀತು ಪಡುತ್ತಾನೋ, ಅಂಥಾ ಪ್ರತಿ ಮನುಷ್ಯನು ಇಂಡಿಯ್ಯ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧಕ್ಕಾಗಿ ಆತನು ಗುರಿಯಾಗಬಹುದಾದ ಇತರ ಯಾವದಾದರೂ ಶಿಕ್ಷೆಯೊಡನೆ ಪಟ್ಟನ ಶಿಕ್ಷೆ ವಿಧಿಸಲ್ಪಡಬಹುದು ; ಸದರಿ ಅಪರಾಧಗಳು ಯಾವವೆಂದರೆ :—

ಇತರ ಶಿಕ್ಷೆಯೊಂದಿಗೆ ಪಟ್ಟನ ಶಿಕ್ಷೆಯನ್ನು ಯಾವ ಅಪರಾಧಗಳು ಎರಡನೆಸಾರಿಗೆ ಸಾಬೀತುಪಟ್ಟ ಸಂಗತಿಯಲ್ಲಿ ವಿಧಿಸಬಹುದೋ ಆ ಅಪರಾಧಗಳು.

A ಗುಂಪು.

(1) ಇಂಡಿಯ್ಯ ಪಿನಲ್ ಕೋಡಿನ 193ನೇ ಪ್ರಕರಣಕ್ಕನುಗುಣವಾಗಿ ಶಿಕ್ಷೆಗೆ ಗುರಿಯಾಗಿರುವ ರೀತಿಯಲ್ಲಿ ಸುಳ್ಳು ಸಾಕ್ಷ್ಯ ಕೊಡೋಣ ಅಥವಾ ಬನಾವಣೆ ಮಾಡೋಣ ;

(2) ಸದರಿ ಕೋಡಿನ 194ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಮರಣ ದಂಡನೆಯಾಗತಕ್ಕ ಅಪರಾಧವು ಸಾಬೀತುಪಡಿಸಬೇಕೆಂಬ ಅಭಿಪ್ರಾಯದಿಂದ ಸುಳ್ಳು ಸಾಕ್ಷ್ಯ ಕೊಡೋಣ ಅಥವಾ ಬನಾವಣೆ ಮಾಡೋಣ ;

(3) ಸದರಿ ಕೋಡಿನ 195ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ನೀರಿನ ಮೇಲೆ ಕಳುಹಿಸುವ ಶಿಕ್ಷೆ ಅಥವಾ ಕೈದಿನ ಶಿಕ್ಷೆ ವಿಧಿಸಲ್ಪಡಬಹುದಾದ ಒಂದು ಅಪರಾಧವು ಸಾಬೀತು ಪಡಿಸಬೇಕೆಂಬ ಅಭಿಪ್ರಾಯದಿಂದ ಸುಳ್ಳು ಸಾಕ್ಷ್ಯಕೊಡೋಣ ಅಥವಾ ಬನಾವಣೆ ಮಾಡೋಣ ;

B ಗುಂಪು.

(4) ಸದರಿ ಕೋಡಿನ 211ನೇ ಮತ್ತು 377ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಒಂದು ಅಸಹಜವಾದ ಅಪರಾಧವನ್ನು ಮಾಡಿದ್ದಾನೆಂಬದಾಗಿ ಒಬ್ಬ ಮನುಷ್ಯನ ಮೇಲೆ ಸುಳ್ಳು ಆಪಾದನೆ ಹೊರಿಸೋಣ ;

C ಗುಂಪು.

(5) ಸದರಿ ಕೋಡಿನ 354ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಒಬ್ಬ ಹೆಂಗಸಿನ ಮಾನವನ್ನು ಭಂಗಪಡಿಸಬೇಕೆಂಬ ಅಭಿಪ್ರಾಯದಿಂದ ಅವಳ ಮೇಲೆ ಬಲಾಂ ನಡಿಸೋಣ ಅಥವಾ ಅಕ್ರಮವಾದ ಬಲೋಪ್ಯೋಗ ಮಾಡೋಣ ;

(6) ಸದರಿ ಕೋಡಿನ 375ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಒಂದು ಸ್ತ್ರೀಯೊಂದಿಗೆ ಅಕ್ರಮವಾದ ಹಚಿಸಂಭೋಗ ಮಾಡೋಣ ;

(7) ಸದರಿ ಕೋಡಿನ 377ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಅನಹಜವಾದ ಅಪರಾಧಗಳು ;

D ಗುಂಪು.

(8) ಸದರಿ ಕೋಡಿನ 390ನೇ ಮತ್ತು 391ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಜೋರಿ ಅಥವಾ ಡಕಾಯಿತಿ ಎಂಬ ದರೋಡೆ ಕಳವು ;

(9) ಸದರಿ ಕೋಡಿನ 393ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಜೋರಿ ಮಾಡಲಿಕ್ಕೆ ಎತ್ನಿಸೋಣ ;

(10) ಸದರಿ ಕೋಡಿನ 394ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಜೋರಿ ಮಾಡುವಲ್ಲಿ ಮನಃಪೂರ್ವಕವಾಗಿ ಹಿಂಸೆ ಮಾಡೋಣ ;

E ಗುಂಪು.

(11) ಸದರಿ ಕೋಡಿನ 413ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ವಾಡಿಕೆಯಾಗಿ ಜೋರಿ ಮಾಲನ್ನು ತೆಕ್ಕೊಳ್ಳೋಣ ಅಥವಾ ಅದರ ವ್ಯಾಪಾರ ಮಾಡೋಣ ;

F ಗುಂಪು.

(12) ಸದರಿ ಕೋಡಿನ 463ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಫೋರ್ಜರಿ-ಯಾ-ಸೃಷ್ಟಿಸೋಣ ;

(13) ಸದರಿ ಕೋಡಿನ 466ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಬಂದು ದಸ್ತಾವೇಜನ್ನು ಸೃಷ್ಟಿಸೋಣ ಮಾಡೋಣ ;

(14) ಸದರಿ ಕೋಡಿನ 467ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಬಂದು ದಸ್ತಾವೇಜನ್ನು ಸೃಷ್ಟಿಸೋಣ ಮಾಡೋಣ ;

(15) ಸದರಿ ಕೋಡಿನ 468ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಮೋಸಮಾಡುವ ನಿಮಿತ್ತ ಸೃಷ್ಟಿಸೋಣ ಮಾಡೋಣ ;

(16) ಸದರಿ ಕೋಡಿನ 469ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಯಾವನೊಬ್ಬ ಮನುಷ್ಯನ ಹೆಸರನ್ನು ಬಡಲಾವು ಪಡಿಸುವ ಉದ್ದೇಶ್ಯ ಸೃಷ್ಟಿಸೋಣ ಮಾಡೋಣ ;

G ಗುಂಪು.

(17) ಈ ಪ್ರಕರಣಕ್ಕನುಗುಣವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ಮಾಡುವ ಉದ್ದೇಶ್ಯ ಸದರಿ ಕೋಡಿನ 443ನೇ ಮತ್ತು 445ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಹೊಂಚುಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ಮನೆಗೆ ಕನ್ನ ಹಾಕೋಣ ;

(18) ಈ ಪ್ರಕರಣಕ್ಕನುಗುಣವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ಮಾಡುವ ಉದ್ದೇಶ್ಯ ಸದರಿ ಕೋಡಿನ 444ನೇ ಮತ್ತು 446ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ರಾತ್ರೀಕಾಲದಲ್ಲಿ ಹೊಂಚುಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ರಾತ್ರೆಕಾಲದಲ್ಲಿ ಮನೆಗೆ ಕನ್ನ ಹಾಕೋಣ.

6. ಗವರ್ನಮೆಂಟಿನವರು, ಮೈಸೂರು ಸೀಮೆಯ ಯಾವ ಪ್ರದೇಶದಲ್ಲಿಯಾದರೂ ಈ ಪ್ರಕರಣದ ನಿಯಮಗಳು ಜಾರಿಯಲ್ಲಿರತಕ್ಕದ್ದೆಂದು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ಕೂಲಕ ಪ್ರಕಟನೆ ಮಾಡಿದಾಗ್ಯೆ, ಅಂಥಾ ಪ್ರದೇಶದಲ್ಲಿರುವ ಯಾವ ಮನುಷ್ಯನಾಗಲಿ, ಇಂಡಿಯನ್ ಪೀನಲ್ ಕೋಡಿನ 375ನೆ ಪ್ರಕರಣದಲ್ಲಿ ವಿವರಿಸಿರುವ ಅಕ್ರಮವಾದ ಸ್ತ್ರೀ ಜಟ ಸಂಗವು ಮಾಡುವದೆ ಸಾಮಾನ್ಯವಾದ ಉದ್ದೇಶ್ಯವುಳ್ಳ ಎರಡು ಅಥವಾ ಎರಡಕ್ಕಿಂತ ಅಧಿಕ ಸಂಖ್ಯೆಯುಳ್ಳ ಜನಗಳ ಕೂಟಕ್ಕೆ ಸೇರಿ ಇದ್ದು, ಅಂಥಾ ಅಪರಾಧವನ್ನು ಮಾಡಲಿಕ್ಕೆ ಸಹಕರಿಸುತ್ತಾನೊ ಅಥವಾ ಮಾಡುತ್ತಾನೊ ಅಥವಾ ಮಾಡಲು ಎತ್ನಿಸುತ್ತಾನೊ ಅಂಥಾ ಮನುಷ್ಯನು, ಸದರಿ ಕೋಡಿನಂತೆ ಆತನು ಅಂಥಾ ಸಹಕರಿಸೋಣ, ಅಪರಾಧ, ಅಥವಾ ಪ್ರಯತ್ನ—ಇದಕ್ಕಾಗಿ ಆತನು ಗುರಿಯಾಗಬಹುದಾದ ಇತರ ಶಿಕ್ಷೆಗೆ ಅಧಿಕವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದು.

ಯಾವ ಸಂದರ್ಭಗಳಲ್ಲಿ ಸ್ತ್ರೀಯೊಡನೆ ಅಕ್ರಮವಾಗಿ ಜಟ ಸಂಗಮ ಮಾಡಿದ್ದಕ್ಕೆ ಪೆಟ್ಟಿನ ಶಿಕ್ಷೆಯನ್ನು ಸಹ ವಿಧಿಸಬಹುದು.

7. ಯಾವ ಅಪ್ರಾಯಸ್ಥನಾದ ಅಪರಾಧಿಯಾದರು,—

(a) ಇಂಡಿಯನ್ ಪೀನಲ್ ಕೋಡಿನ ಪ್ರಕಾರ ಮರಣದಂಡನೆಯಲ್ಲದ ಇತರ ದಂಡನೆಗೆ ಗುರಿಯಾಗಬಹುದಾದ ಯಾವ ಅಪರಾಧವನ್ನಾಗಲಿ, ಅಥವಾ

ಯಾವ ಸಂದರ್ಭದಲ್ಲಿ ಅಪ್ರಾಯಸ್ಥರಾದ ಅಪರಾಧಿಗಳು ಪೆಟ್ಟಿನಿಂದ ಶಿಕ್ಷಿಸಲ್ಪಡಬಹುದು.

(b) ಯಾವ ಇತರ ಕಾನೂನಿನ ಪ್ರಕಾರ ಕೈದು ದಂಡನೆಗೆ ಗುರಿಯಾಗಬಹುದಾದ ಯಾವ ಅಪರಾಧವನ್ನಾಗಲಿ,—

ಮಾಡಲಿಕ್ಕೆ ಸಹಕರಿಸುತ್ತಾನೊ, ಮಾಡುತ್ತಾನೊ, ಅಥವಾ ಮಾಡಲು ಎತ್ನಿಸುತ್ತಾನೊ, ಅಂಥಾವನು, ಅಂಥಾ ಅಪರಾಧ, ಸಹಕರಿಸೋಣ, ಅಥವಾ ಪ್ರಯತ್ನ—ಇದಕ್ಕಾಗಿ ಆತನು ಗುರಿಯಾಗಬಹುದಾದ ಯಾವ ಇತರ ದಂಡನೆಗೆಯಾದರೂ ಬದಲಾಗಿ ಪೆಟ್ಟಿನ ಶಿಕ್ಷೆವಿಧಿಸಲ್ಪಡಬಹುದು.

ಆದರೆ ಗವರ್ನಮೆಂಟಿನವರು, (b) ಕಲಮಿನಲ್ಲಿ ಕಾಣುವ ಯಾವ ಅಪರಾಧಗಳ ಸಮ್ಮಂಧವಾಗಿ ಪೆಟ್ಟಿನ ಶಿಕ್ಷೆ ವಿಧಿಸಕೂಡದೆಂದು ಈಪರವಾಗಿ ಅವುಗಳನ್ನು ವಿಶೇಷಿಸಲು ಯುಕ್ತವೆಂದೆಣಿಸಬಹುದೊ ಆ ಅಂಶವನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ಕೂಲಕ ಪ್ರಕಟಿಸಬಹುದು.

ಟಿಪ್ಪಣಿ.—ಈ ಪ್ರಕರಣದಲ್ಲಿ "ಅಪ್ರಾಯಸ್ಥನಾದ ಅಪರಾಧಿ" ಎಂಬುವದಕ್ಕೆ ಹದಿನಾರು ವರುಷಕ್ಕಿಂತ ಕಡಿಮೆ ಪ್ರಾಯವುಳ್ಳವ ಎಂತ ಕೋರ್ಟಿನವರು, ತಾವು ಅಗತ್ಯವೆಂದು ಎಣಿಸಬಹುದಾದ ವಿಚಾರಣೆ ಏನಾದರು ಮಾಡಿದ ನಂತರ, ಅಭಿಪ್ರಾಯ ಪಡುವ ಅಪರಾಧಿ ಎಂಬ ಅರ್ಥವಾಗುತ್ತದೆ. ಇಂಥಾ ವಿಷಯದಲ್ಲಿ ಕೋರ್ಟಿನವರ ಶೀರ್ಷ ಕಡೇದಾಗಿ ನಿರುತ್ತರವಾದ್ದಾಗಿರುತ್ತದೆ.

ಪಿ. ಎಸ್. ಕೃಷ್ಣಮೂರ್ತಿ,
ಮೈಸೂರು ಸೀಮೆಯ ದಿವಾನರು.

Mysore Government Central Press, Bangalore.—1904.